ಎಸ್.ಎನ್. ಮಹಾಬಲರಾವ್, ಅಗ್ರಹಾರ
*ಮದುವೆ ಆದರೆ ಸೌಂದರ್ಯಕ್ಕೆ ಧಕ್ಕೆಯಂತೆ...?*




ಹೌದು. ಮದುವೆಯಾದ ಸ್ವಲ್ಪ ದಿನಕ್ಕೇ ಗಂಡಿನ ಮುಖ ಹ್ಯಾಪ್‌ಮೋರೆಯಾಗಿಬಿಡುತ್ತದೆ.

ಎಂ.ಎನ್. ಸೋಮಶೇಖರ್, ಮೈಸೂರು
*ಬದುಕಿನಲ್ಲಿ ಹಾಸ್ಯ ಏಕೆ ಬೇಕು?*
ಅಳಿಸುವುದನ್ನು ಅಳಿಸಲು.

ಹೇಮಾವತಿ ಜೈನ್, ಹೂವಿನಹಡಗಲಿ
*ಹೊಸದನ್ನು ಪ್ರತಿಪಾದಿಸುವ ನೀವು ಸಿದ್ದು ಸರ್ಕಾರಕ್ಕೆ ಥಿಂಕ್-ಟ್ಯಾಂಕ್ ಆಗಬಾರದೇಕೆ?*
ಆಗುವುದಿಲ್ಲ; ಹೆಚ್ಚೆಂದರೆ ಆ ಸರ್ಕಾರದ ಕೊಳಕನ್ನು ಹೊರತಳ್ಳುವ ಫ್ಲಷ್ ಟ್ಯಾಂಕ್ ಆಗಬಹುದಷ್ಟೆ.

ಎಚ್. ಆನಂದಕುಮಾರ್, ಚಿತ್ರದುರ್ಗ
*ಅದೇ ಕಲ್ಲು, ಮಣ್ಣು, ಸೂರ್ಯ, ಚಂದ್ರ ನೋಡುವುದಕ್ಕೆ ವಿದೇಶ ಪ್ರವಾಸ ಏಕೆ ಸ್ವಾಮಿ?*
ಆಹಾಹಾ! ಹೆಂಡತಿಯ ಟ್ವಿನ್ ಸಿಸ್ಟರ್‌ನ ಕದ್ದು ನೋಡ್ತಾರಲ್ಲಾ... ಇದೂ ಹಾಗೇ!

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಜೀವನ ಒಂದು ಪಯಣವಂತೆ. ಆ ಪಯಣದ ಅಂತ್ಯ ಯಾವುದು?*



ಹಾರಹಾಕಿರುವ ಫೋಟೋ.

ಶಿವು, ದೇಶವಳ್ಳಿ
*ಹದಿಹರೆಯದ ಹುಚ್ಚು ಕೋಡಿ ಮನಸುಗಳಿಗೆ ನಿಮ್ಮ ಒಂದು ಸಾಲಿನ ಬೋಧನೆಯೇನು?*
ವಾಟ್ಸಪ್ ಅಂತ ಯೋಚಿಸದೆ ಲಿಂಕ್ಡಿನ್ ಆದ್ರೆ ಕರೆನ್ಸೀನೂ ಬೋಳು, ನೆಟ್ವರ್ಕೂ ಹಾಳು.

ಎಚ್.ಆರ್. ದೇಸಾಯಿ, ರಾಯಚೂರು
*ಇಂದು ಸುಧಾಮನಿದ್ದಿದ್ದರೆ ಬಡವನೆಂದು ಬಿಪಿಎಲ್ ಕಾರ್ಡ್, ಅನ್ನಭಾಗ್ಯ ದೊರೆಯುತ್ತಿತ್ತೋ ಅಥವಾ ಅವನ ಜಾತಿ ಅಡ್ಡ ಬರುತ್ತಿತ್ತೋ?*
ಅವ ಲಕ್ಕಿ ಆದರೆ ಭಾಗ್ಯ, ಕಾರ್ಡ್ ಸಿಗುತ್ತಿತ್ತು. ಅವ-ಲಕ್ಕಿ (ದುರದೃಷ್ಟದವ) ಆದರೆ ಜಾತಿ ಅಡ್ಡ ಬರುತ್ತಿತ್ತು.

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಇಲ್ಲೊಬ್ಬಳು ಗೊರಕೆ ಹೊಡೆಯುವ ಪತಿಯನ್ನು ಪೊರಕೆಯಿಂದ ಬಾರಿಸಿ ಹೊರಕ್ಕೆ ಅಟ್ಟಿದಳಲ್ಲಾ...?*
ತಿಳಿಯಿತು. ಗೊರಕೆ ಹೊಡೆಯುವಾಗ ಅಲುಗಾಡುತ್ತಿದ್ದ ಅವನ ಮೀಸೆ ಜಿರಳೆಯ ಮೀಸೆಯನ್ನೇ ನೆನಪಿಸಿತಂತೆ...

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಅಧಿಕಾರಕ್ಕೆ ಬರುವ ಮುನ್ನ ಸುಭಗರಾಗುವ ರಾಜಕಾರಣಿಗಳು ನಂತರ ಏಕೆ ಭ್ರಷ್ಟರಾಗಿಬಿಡುತ್ತಾರೆ?*
ಧಾನ್ಯಗುಣ. ಅಕ್ಕಿ ಅಕ್ಕಿಯಾಗಿ ಚೆನ್ನಾಗಿಯೇ ಇರುತ್ತದೆ. ಬೆಂದ ಕೆಲವೇ ಗಂಟೆಗೆ ಹಳಸಲು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಬುದ್ಧಿವಂತನಿಗೂ, ಜಾಣನಿಗೂ, ಪ್ರಜ್ಞಾವಂತನಿಗೂ ಇರುವ ವ್ಯತ್ಯಾಸವೇನು?*
ಕಲಿತವನು ಬುದ್ಧಿವಂತ; ಕಲಿತಿದ್ದರಿಂದ ಪ್ರಶಸ್ತಿ ಪಡೆದವನು ಜಾಣ; ಪ್ರಶಸ್ತಿ ಪಡೆದೂ ಐಲೈಲಾಗಿ ಆಡದವನು ಪ್ರಜ್ಞಾವಂತ.

ವಿ.ಎಸ್. ಹಿಂದೂಪುರ, ಬಳ್ಳಾರಿ
*ದೊಡ್ಡ ಮಠಗಳಲ್ಲಿ ಆನೆ ಸಾಕುವುದರ ಸಂಕೇತವೇನು ಗುರುವೆ?*
ಮಠಕ್ಕೆ ಅದೆಂಥಾ ದೊಡ್ಡವ್ನೇ ಬಂದ್ರೂ ಹಾಕಿದ್ದುಲ್ ತಿಂದ್ಕೊಂಡು, ತಲೆ ಆಡಿಸ್ಕೊಂಡು ಹೊರಗೇ ನಿಂತಿರಬೇಕೂಂತ.

ಜಾ.ರು. ಆದಿನಾರಾಯಣಮುನಿ, ಬೆಂಗಳೂರು
*ಹೆಂಡತಿಯನ್ನು ಕಾಲ ಕೆಳಗೆ, ತೊಡೆಯ ಮೇಲೆ, ಹೆಗಲ ಮೇಲೆ, ತಲೆಯ ಮೇಲೆ ಹೊತ್ತವರು ಯಾರು?*
ಸಾಲ್ಸಾ ಡ್ಯಾನ್ಸ್‌ನವನು.

ವೈ.ಎನ್. ಸುಂದರೇಶನ್, ಮೈಸೂರು
*ಹೆಣ್ಣನ್ನು ಪೂರ್ತಿ ಅರ್ಥ ಮಾಡಿಕೊಂಡವರು ಯಾರಾದರೂ ಇದ್ದಾರೆಯೇ?*
ಯಾವ್ಯಾವ ಹೆಣ್ಣಿಗೆ ಎಲ್ಲೆಲ್ಲಿ ಗಾಳ ಹಾಕ್ಬೇಕೂಂತ ಅರ್ಥ ಮಾಡಿಕೊಂಡಿರೋ ಅಡ್ವರ್ಟೈಸ್‌ಮೆಂಟ್‌ನವರು!

## ಬಹುಮಾನಿತ ಪ್ರಶ್ನೆ

ನಾಗವೇಣಿ ಸೋಮಶೇಖರ, ಮೈಸೂರು
*ಸಮುದ್ರದಲ್ಲಿ ಅಡಗಿರುವ ಕವಡೆಗಳು, ಶಂಖಕ್ಕೆ ಇರುವ ಪ್ರಾಧಾನ್ಯ ಕಪ್ಪೆಚಿಪ್ಪುಗಳಿಗೆ ಏಕಿಲ್ಲ?*
ಗರ ಬೀಳಿಸ್ಕೊಳ್ಳೋವ್ವು, ಶಂಖ ಹೊಡ್ಕೊಳ್ಳೋವ್ರೇ ಹೆಚ್ಚಾಗಿರೋದ್ರಿಂದ.

ಎಸ್.ಎ. ಮೋಹನರಾಜು, ಶಿವಮೊಗ್ಗ
*ನಕ್ಕಳು; ಸೋತುಹೋದೆ. ಸಿಕ್ಕಳು; ಗೆದ್ದುಬಂದೆ. ಏನಿದರ ಅರ್ಥ?*
ಅದೃಷ್ಟಲಕ್ಷ್ಮಿ, ಜೂಜು.

ಮಹಾವೀರ ಕಾಸರ, ಶಿವಮೊಗ್ಗ
*ಮಹಾಭಾರತದ ಸೂತ್ರಧಾರ ಕೃಷ್ಣ; ಇಂದಿನ ರಾಜಕೀಯದ ಸೂತ್ರಧಾರ?*
ತೃಷ್ಣಾ!

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಜೀವನದ ಮೊದಲ ಮೆಟ್ಟಿಲು ಯಾವುದು?*
ತೊಟ್ಟಿಲು.

ಬೆಟ್ಟಹಳ್ಳಿ ಗೋಪಿನಾಥ್, ಸೂಲಿಬೆಲೆ
*ಯುದ್ಧ ಮತ್ತು ವಾಗ್ಯುದ್ಧ ಸಮಾನಾರ್ಥಕ ಪದಗಳೇ?*
ಸಮಾನ ಅನರ್ಥಕ ಪದಗಳು; ಟಿಪ್ಪು ಮಾಡಿದ್ದು ಯುದ್ಧ; ಟಿಪ್ಪುವಿನ ಬಗ್ಗೆ ಮಾಡಿದ್ದು ವಾಗ್ಯುದ್ಧ.

ವಿ. ಹಮೀದ್, ವಿಟ್ಲ
*ಓಲ್ಡ್ ಲವರ್ ಬಾರ್‌ಗೆ ಕರೆಯುತ್ತಾಳೆ, ನ್ಯೂ ಲವರ್ ಪಾರ್ಕ್‌ಗೆ ಕರೆಯುತ್ತಾಳೆ. ಎಲ್ಲಿಗೆ ಹೋಗಲಿ?*



ಹೇಗೂ ಟೈಟಾದ್ಮೇಲೆ ಬಿದ್ಕೊಳ್ಳೋದು ಪಾರ್ಕಲ್ಲೇ. ಮೊದಲು ಬಾರ್‌ಗೇ ಹೋಗಿ.

ಸಂತೆಬೆನ್ನೂರು ಫೈಜ್ನಟ್ರಾಜ್, ದಾವಣಗೆರೆ
*ಜೀವನದ ಪರಮ ಸತ್ಯ ಯಾವುದು ಬಾಸ್?*
ಸುಳ್ಳಿಗೆ ಸಾವಿಲ್ಲ ಎನ್ನುವುದು.

■ ರಾಮ್